"ನಿನ್ನಂತಹ ಹುಡುಗ ವಸತಿ ಕೇಳಿ ಬಂದಾಗ ನನಗಾಗುವ ಸಂತೋಷ ಅಷ್ಟಿಷ್ಟಲ್ಲ ಮಗ!" ಎಂದಳು. ಅವಳ ತೀಕ್ಷ್ಣವಾದ ಕಣ್ಣುಗಳು ಅವನನ್ನು ಅಡಿಯಿಂದ ಮುಡಿಯವರೆಗೆ ಒಮ್ಮೆ ಸ್ಕ್ಯಾನರಿನಂತೆ ಅಳೆದು ತೃಪ್ತಿಯಿಂದ ಹೊಳೆದವು.

ಮೊದಲ ಮಹಡಿಯನ್ನು ತಲುಪುತ್ತಿದ್ದಂತೆ, "ಈ ಮಹಡಿಯನ್ನು ಸಂಪೂರ್ಣವಾಗಿ ನಾನೇ ಬಳಸುತ್ತಿದ್ದೇನೆ." ಎಂದಳು ಮುದುಕಿ.

ಎರಡನೇ ಮಹಡಿಯನ್ನು ಹತ್ತಿ, "ಇಲ್ಲಿ ನಿನ್ನ ವಸತಿ." ಎನ್ನುತ್ತಾ ಅವನಿಗೊಂದು ಕೋಣೆಯನ್ನು ತೋರಿಸಿದಳು. "ಇದು ನಿನ್ನ ಬೆಡ್ ರೂಮ್." ಎನ್ನುತ್ತಾ ಲೈಟ್ ಉರಿಸಿದಳು. "ನೋಡು, ಬೆಳಗಿನ ಸೂರ್ಯ ನೇರವಾಗಿ ನಿನ್ನ ರೂಮಿಗೇ ಮೊದಲು ಬೆಳಕು ಚೆಲ್ಲುತ್ತಾನೆ! ಹೇಗಿದೆ ಪರ್ಕಿನ್ಸ್? ನಿನ್ನ ಹೆಸರು ಪರ್ಕಿನ್ಸ್ ತಾನೆ?"

"ಇಲ್ಲ. ನನ್ನ ಹೆಸರು ವೀವರ್. ಬಿಲ್ಲಿ ವೀವರ್."

"ಒಹ್, ಮಿಸ್ಟರ್ ವೀವರ್. ನಿನಗೆ ಚಳಿ ಆದರೆ ಗ್ಯಾಸ್ ಉರಿಸಬಹುದು."

"ಥ್ಯಾಂಕ್ಸ್ ಅಜ್ಜಿ." ಅವನಿಗೆ ಮತ್ತೇನು ಹೇಳುವುದೆಂದು ತೋಚಲಿಲ್ಲ.

"ನೀನು ಬಂದಿದ್ದು ಎಷ್ಟೊಂದು ಒಳ್ಳೆದಾಯ್ತು ನೋಡು. ನಾನು ಎಷ್ಟು ಹತಾಶಳಾಗಿದ್ದೆ ಗೊತ್ತಾ?"

ಅವನು ಏನು ಹೇಳುವುದೆಂದು ತೋಚದೆ ತನ್ನ ಸೂಟ್‌ಕೇಸನ್ನು ತೆರೆಯಲು ಅಣಿಯಾದ.

"ಮಗ, ನಿಂದು ಊಟ ಆಯ್ತಾ?" ಮುದುಕಿ ಕೇಳಿದಳು.

"ನನಗೆ ಹಸಿವಿಲ್ಲ ಅಜ್ಜಿ. ಬೆಳಗ್ಗೆ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳಬೇಕು. ನೆಮ್ಮದಿಯಾಗಿ ಮಲಗಿದರೆ ಸಾಕೆನಿಸಿಬಿಟ್ಟಿದೆ." ಎಂದ ಬಿಲ್ಲಿ.

"ಸರಿ ಮಗ. ನೀನು ನಿನ್ನ ವಸ್ತುಗಳನ್ನು ಹೊರತೆಗೆದು ಜೋಡಿಸಿಡು. ಮಲಗುವುದಕ್ಕೆ ಹೋಗುವ ಮುನ್ನ ಕೊಂಚ ಕೆಳಗಿಳಿದು ಬಾ. ರಿಜಿಸ್ಟರಿನಲ್ಲಿ ನೀನು ಹೆಸರು, ವಿಳಾಸ ಸಹಿ ಇತ್ಯಾದಿ ಮಾಡಬೇಕು.

